**<u>ಸಾಕ್ಷಿಯನ್ನು ದಿನಾಂಕ 17.02.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎ.ಬಿ.ಎಸ್ ವಕೀಲರಿಂದಃ</u>**

ನಾನು ಬಿಕಾಂ ಪದವಿವರೆಗೆ ಓದಿದ್ದೇನೆ. ನನ್ನ ತಾಯಿಗೆ ಮಂಡಿ ನೋವು ಇದೆ, ಸುಗರ್ ಮತ್ತು ಬಿಪಿ ಇದೆ. ನನ್ನ ತಾಯಿಗೆ ಉಷಾರಿಲ್ಲದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಅವರ ಚಿಕಿತ್ಸೆ ಬಗ್ಗೆ ದಾಖಲೆ ಇದೆ. ಅದನ್ನು ಹಾಜರುಪಡಿಸಲು ತೊಂದರೆ ಇಲ್ಲ. ನನ್ನ ತಾತ ಅಬ್ದುಲ ಗಪರ ಸೆಪ್ಟೆಂಬರ್ 2020 ರಲ್ಲಿ ಮರಣ ಹೊಂದಿದ್ದಾರೆ. ಮೂಲತಃ ಎ ಷೆಡ್ಯೂಲ್ ಆಸ್ತಿಗೆ ನನ್ನ ತಾತ ಮಾಲೀಕರಾಗಿದ್ದರು ಎಂದರೆ ನಿಜ. ನನ್ನ ತಾತನಿಗೆ 5 ಜನ ಮಕ್ಕಳು. ಅವರೆಂದರೆ ನನ್ನ ತಾಯಿ, ಅವಳ ಸಹೋದರ ಅಬ್ದುಲ ರೆಹಮಾನ, 3 ನೇ ಯವರು ನೂರಾನಿ, 4 ನೇಯವರು ಅಬ್ದುಲ ಸಲಾಂ, 5 ನೇ ಯವರು ಪರಾನ್ ಇರುತ್ತಾರೆ. ನನ್ನ ತಾತನ ಹೇಳಿಕೆಯಂತೆ ಅವರ ಎಲ್ಲಾ ಮಕ್ಕಳು 2021 ರಲ್ಲಿ ವಿಭಾಗ ಪತ್ರ ಮಾಡಿಕೊಂಡಾಗ ಬಿ ಷೆಡ್ಯೂಲ್ ಆಸ್ತಿ ನನ್ನ ತಾಯಿ ಪಾಲಿಗೆ ಬಂದಿದೆ. ನನ್ನ ತಾತನ ಮರಣದ ಬಳಿಕ ಎ ಷೆಡ್ಯೂಲ್ ಆಸ್ತಿ ನನ್ನ ತಾತನ 3 ಜನ ಮಕ್ಕಳಿಗೆ ಜಂಟಿಯಾಗಿ ಬಂದಿತ್ತು ಎಂದರೆ ನಿಜ. ಆ ಕಾಲಕ್ಕೆ ಪ್ರತಿವಾದಿಗೆ ನಾವೇ ಮಾಲೀಕರು ಬಾಡಿಗೆ ಕೊಡಿ ಎಂದು ನೋಟಿಸ್ ಕೊಟ್ಟಿಲ್ಲ. ನನ್ನ ತಾಯಿಯ ಹೆಸರಿಗೆ ಪ್ರತ್ಯೇಕ ಖಾತೆ ಯಾದ ಬಳಿಕ ಸಹ ಬಾಡಿಗೆ ಕೊಡಿ ಎಂದು ಸಹ ನೋಟಿಸ್ ಕೊಟಿಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ ಮೌಖಿಕವಾಗಿ ತಿಳಿಸಿದ್ದೇವೆ. ನನ್ನ ತಾತ ಸುಭಾಷ ನಗರ, ಮನೆ ನಂ. 137 ರಲ್ಲಿ ವಾಸವಿದ್ದರು ಎಂದರೆ ನಿಜ. 2018 ರಲ್ಲಿ ಆ ಮನೆಯ ಮೊದಲನೇ ಮಹಡಿ ಕಟ್ಟಿಸಿದ್ದರು ಎಂದರೆ ಸರಿಯಲ್ಲ, ಅದಕ್ಕೂ ಮೊದಲೇ ಕಟ್ಟಿಸಿದ್ದರು. ಪ್ರತಿವಾದಿ 10 ವರ್ಷಗಳಿಂದ ಎ ಷೆಡ್ಯೂಲ್ ಆಸ್ತಿಯಲ್ಲಿ ಬಾಡಿಗೆಗೆ

ಇದ್ದಾರೆ. ಪ್ರತಿವಾದಿ ಒಟ್ಟು ಎಷ್ಟು ಅಳತೆಯ ಕಟ್ಟಡದಲ್ಲಿ ಬಾಡಿಗೆಗೆ ಇದ್ದಾರೆ ಎಂದು ನಿಖರವಾಗಿ ಗೊತ್ತಿಲ್ಲ. ಅವರು 41*50 ಅಡಿಯಲ್ಲಿ ಬಾಡಿಗೆಗೆ ಇದ್ದಾರೆ ಎಂದರೆ ಸರಿಯಲ್ಲ. ನನ್ನ ತಾತ ಮತ್ತು ಪ್ರತಿವಾದಿ ನಡುವೆ ಆದ ಅಗ್ರಿಮೆಂಟ ನೋಡಿದ್ದೇನೆ. ಅದರ ಮೂಲ ಪ್ರತಿ ನಮ್ಮ ಬಳಿ ಇಲ್ಲ. ಜೆರಾಕ್ಸ ಪ್ರತಿಯನ್ನು ಹಾಜರುಪಡಿಸಿದ್ದೇವೆ. ಪ್ರತಿವಾದಿ ಪೂರ್ತಿ ಆಸ್ತಿಗೆ ಬಾಡಿಗೆದಾರ ಅಲ್ಲ ಎಂದರೆ ನಿಜ. ಆ ಬಗ್ಗೆ ನನ್ನ ಅಪಿಡೆವಿಟ್ ನಲ್ಲಿ ಹೇಳಿದ್ದೇನೆ. ಎ ಷೆಡ್ಯೂಲ್ ಆಸ್ತಿಯ ಪೂರ್ವಕ್ಕೆ ನನ್ನ ತಾತನ ಬೇರೆ ಆಸ್ತಿ ಇದೆ. ಆ ಪೂರ್ವಕ್ಕೆ ಇರುವ ಆಸ್ತಿಯನ್ನು ಸಹ ಭಾಗ ಮಾಡಿಕೊಂಡಿದ್ದಾರೆ. ಎ ಷೆಡ್ಯೂಲ್ ಆಸ್ತಿಯಲ್ಲಿ ನಮ್ಮ ತಾಯಿಯ ಪಾಲಿನ ಆಸ್ತಿಗೆ ಪ್ರತ್ಯೇಕ ಗೋಡೆ ಹಾಕಿಲ್ಲ. ಕೇವಲ ದಾಖಲೆಗಳಲ್ಲಿ ಮಾತ್ರ ಪಾಲು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ನಿಜ.

**ಈ ವೇಳೆಗೆ ಪ್ರತಿವಾದಿಗಳ ಪರ ವಕೀಲರು ಪುನಃ ಸಮಯ ಕೋರಿದ್ದರಿಂದ ಮುಂದೂಡಲಾಗಿದೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ಮೈಸೂರು**